



ಗೃಹಸ್ಥರಿಗೆ ಉಪದೇಶ

**ಗೃ**ಹಸ್ಥರು ಮಾನಸಿಕವಾಗಿ ಕಾಮಕಾಂಚನಗಳನ್ನು ತ್ಯಾಗ ಮಾಡಬೇಕು. ಹಾಗೆಂದು ಸಂಸಾರವನ್ನು 'ಕಾಕಪಿಷ್ಟ' ಎಂದು ನೋಡಲಾಗುವುದಿಲ್ಲ. ಗೃಹಸ್ಥರ ಕರ್ತವ್ಯವೇನು ಎಂಬುದನ್ನು ಚೈತನ್ಯದೇವ ಹೇಳಿಹೋಗಿದ್ದಾನೆ. ಅದು, "ಜೀವಿಗಳಿಗೆ ದಯೆ ತೋರುವುದು, ವೈಷ್ಣವರ (ಭಕ್ತರ) ಸೇವೆ ಮಾಡುವುದು, ಭಗವನ್ನಾಮ ಸಂಕೀರ್ತನೆ ಮಾಡುವುದು."

ಎರಡು ಮಾರ್ಗಗಳಿವೆ: ಕರ್ಮಯೋಗ ಮತ್ತು ಮನೋಯೋಗ. ಯಾರು ಗೃಹಸ್ಥರೊ ಅವರು ಆತನೊಡನೆ ಐಕ್ಯವಾಗುವುದು ಕರ್ಮದ ಮೂಲಕ. ಗೃಹಸ್ಥರಿಗೆ ಸತ್ಸಂಗ (ಸಾಧುಸಂಗ) ಆವಶ್ಯಕ. ಮೊದಲು ಸಾಧುಸಂಗ, ಬಳಿಕ ಭಗವಂತನಲ್ಲಿ ಶ್ರದ್ಧೆ. ಆಗಾಗ ಸಾಧುಸಂಗ ಒಳ್ಳೆಯದು. ಮನುಷ್ಯನಿಗೆ ರೋಗ ಹತ್ತಿಕೊಂಡೇ ಇದೆ. ಅದು ಸಾಧುಸಂಗದಿಂದ ತಲೆತಗ್ಗಿಸುತ್ತದೆ.

ಸಂಸಾರದಲ್ಲಿ ಇದ್ದು ಭಗವಂತನ ಸಾಕ್ಷಾತ್ಕಾರ ಪಡೆಯಬೇಕಾದರೆ ಒಂದು ಕೈಯಿಂದ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಂಡಿರಬೇಕು, ಇನ್ನೊಂದು ಕೈಯಿಂದ ಕೆಲಸಕಾರ್ಯಗಳನ್ನು ಮಾಡುತ್ತಿರಬೇಕು. ಯಾವಾಗ ಕೆಲಸಕಾರ್ಯಗಳಿಂದ ಬಿಡುಗಡೆ ಹೊಂದುವೆಯೊ ಆಗ ಎರಡು ಕೈಗಳಿಂದಲೂ ಭಗವಂತನ ಪಾದಪದ್ಮಗಳನ್ನು ಹಿಡಿದುಕೊಳ್ಳಬೇಕು. ನಿರ್ಜನ ಪ್ರದೇಶದಲ್ಲಿ ವಾಸ ಮಾಡಬೇಕು, ಕೇವಲ ಆತನ ಚಿಂತನೆ ಮತ್ತು ಸೇವೆಯಲ್ಲಿಯೆ ನಿರತನಾಗಿರಬೇಕು.

ಗೃಹಸ್ಥನು, ಋಣಗಳನ್ನು ಅಂದರೆ ದೇವಋಣ, ಪಿತೃಋಣ, ಋಷಿಋಣ—ಇವುಗಳನ್ನೆಲ್ಲ ತೀರಿಸಬೇಕಾಗಿದೆ: ಆತ ಪತ್ನಿಋಣವನ್ನೂ ತೀರಿಸಬೇಕಾಗಿದೆ: ಆಕೆಯಿಂದ ಒಂದೊ, ಎರಡೊ ಮಕ್ಕಳನ್ನು ಪಡೆದು ಆಕೆ ಪತಿವ್ರತೆಯಾಗಿದ್ದರೆ ಆಕೆಯ ಪರಿಪಾಲನೆ ಮಾಡುವುದು. ಗೃಹಸ್ಥರಿಗೆ ಕೆಲಸಕಾರ್ಯಗಳೇನೋ ನಿಶ್ಚಯವಾಗಿ ಇವೆ. ಮಕ್ಕಳನ್ನು ಬೆಳೆಸುವುದು, ಹೆಂಡತಿಗೆ ಹಿಟ್ಟು ಬಟ್ಟೆ ಹಾಕೋದು, ಆಕೆಗೆ ಆಸ್ತಿ ಇಟ್ಟು ಹೋಗೋದು ಇವನ್ನೆಲ್ಲ ಮಾಡಬೇಕಾಗಿದೆ.

**ಸಬ್–ಜಡ್ಜಿ:** ಮಕ್ಕಳನ್ನು ಎಷ್ಟು ಕಾಲದವರೆಗೆ ನೋಡಿಕೊಳ್ಳಬೇಕು?

**ಶ್ರೀರಾಮಕೃಷ್ಣರು:** ಪ್ರಾಪ್ತ ವಯಸ್ಸು ಬರುವವರೆಗೆ. ಮರಿ ದೊಡ್ಡದಾಗಿ ಬೆಳೆದು ತನ್ನ ಯೋಗಕ್ಷೇಮವನ್ನು ತಾನೇ ನೋಡಿಕೊಳ್ಳುವ ಶಕ್ತಿಯನ್ನು ಸಂಪಾದಿಸಿಕೊಂಡಾಗ ತಾಯಿ ಹಕ್ಕಿ ಅದನ್ನು ಕುಟುಕಿ ಓಡಿಸಿಬಿಡುತ್ತದೆ. ಮತ್ತೆ ಅದು ತನ್ನ ಹತ್ತಿರ ಬರಲು ಬಿಡುವುದಿಲ್ಲ. (ಎಲ್ಲರೂ ನಗುತ್ತಾರೆ)

**ಸಬ್–ಜಡ್ಜಿ:** ಹೆಂಡತಿಯ ಸಂಬಂಧವಾಗಿ ಗಂಡನ ಕರ್ತವ್ಯವೇನು?

**ಶ್ರೀರಾಮಕೃಷ್ಣರು:** ನೀನು ಬದುಕಿರುವವರೆಗೆ ಆಕೆಗೆ ಧರ್ಮೋಪದೇಶ ನೀಡಬೇಕು ಮತ್ತು ಹಿಟ್ಟು ಬಟ್ಟೆ ನೀಡಬೇಕು. ಆಕೆ ಪತಿವ್ರತೆಯಾಗಿದ್ದರೆ ನೀನು ಸತ್ತನಂತರ ಆಕೆಯ ಜೀವನಾಂಶಕ್ಕೆ ಬೇಕಾಗಬಹುದಾದ ಅನುಕೂಲತೆಗಳನ್ನು ಮೊದಲೆ ಮಾಡಿಡಬೇಕು. ಆದರೆ ಜ್ಞಾನೋನ್ಮಾದ ಉಂಟಾಗಿಬಿಟ್ಟಿತು ಅಂದರೆ ನಿನಗೆ ಯಾವ ಕರ್ತವ್ಯವೂ ಇಲ್ಲ. ಆಗ ನಿನಗೆ ಮಾರನೆ ದಿನದ ಯೋಚನೆ ಬಾರದೆ ಇದ್ದರೂ ಭಗವಂತನೇ ಅದರ ಕುರಿತು ಯೋಚಿಸುತ್ತಾನೆ. ನಿನಗೆ ಜ್ಞಾನೋನ್ಮಾದ ಬಂದುಬಿಟ್ಟರೆ ನಿನ್ನ ಸಂಸಾರದವರ ಹಿತಚಿಂತನೆಯನ್ನು ಆತ ಮಾಡುತ್ತಾನೆ. ಜಮೀನುದಾರ ಅಪ್ರಾಪ್ತವಯಸ್ಕ ಮಗನನ್ನು ಬಿಟ್ಟು ಸತ್ತರೆ, ಕೋರ್ಟಿನಿಂದ ನೇಮಿಸಲ್ಪಟ್ಟ ಅಧಿಕಾರಿಯು ಆತನ ರಕ್ಷಕನಾಗುತ್ತಾನೆ. ಇವೆಲ್ಲ ಕಾನೂನಿಗೆ ಸಂಬಂಧಪಟ್ಟ ವಿಷಯಗಳು. ನಿನಗಿವು ಗೊತ್ತೇ ಇವೆ.

ಗೃಹಸ್ಥರಿಗೂ ಭಗವಂತ ದೊರಕುತ್ತಾನೆ. ಆದರೆ ವಿವೇಕ ವೈರಾಗ್ಯ ಬೇಕು. ಭಗವಂತನೊಬ್ಬನೇ ವಸ್ತು, ಉಳಿದುದೆಲ್ಲ ಅನಿತ್ಯವಾದದ್ದು, ಒಂದೆರಡು ದಿನದ ಬಾಳಿನವು. ಈ ಪಕ್ವ ಬೋಧೆ ಬೇಕು. ಮೇಲೆ ಮೇಲೆ ತೇಲಿದರೆ ಆಗದು, ಆಳಕ್ಕೆ ಮುಳುಗಬೇಕು. ಸಂಸಾರದಲ್ಲಿಯೂ ಕೆಲವರಿಗೆ ಜ್ಞಾನ ದೊರಕುತ್ತದೆ. ಅದಕ್ಕಾಗಿಯೇ ಎರಡು ವಿಧದ ಯೋಗಿಗಳ ವಿಷಯ ಶಾಸ್ತ್ರಗಳಲ್ಲಿ ಹೇಳಿದೆ: ಗುಪ್ತಯೋಗಿ, ವ್ಯಕ್ತಯೋಗಿ. ಯಾರು ಸಂಸಾರವನ್ನು ತ್ಯಜಿಸಿದ್ದಾರೊ ಅವರೇ ವ್ಯಕ್ತಯೋಗಿಗಳು; ಅವರನ್ನು ಎಲ್ಲರೂ ಗುರುತಿಸಬಲ್ಲರು. ಗುಪ್ತಯೋಗಿಗಳು ಪ್ರಕಾಶಕ್ಕೆ ಬರುವುದಿಲ್ಲ.

ಗೃಹಸ್ಥರಿಗೆ ದುಡ್ಡಿನ ಆವಶ್ಯಕತೆ ಇದೆ; ಏಕೆಂದರೆ ಆತನಿಗೆ ಹೆಂಡತಿ ಮಕ್ಕಳಿದ್ದಾರೆ. ಅವರ ಪೋಷಣೆಗಾಗಿ ಆತ ದುಡ್ಡು ಕೂಡಿಡಬೇಕಾಗುತ್ತದೆ. ಕೇವಲ ಸಂನ್ಯಾಸಿ ಮತ್ತು ಹಕ್ಕಿ ಕೂಡಿಡುವುದಿಲ್ಲ. ಆದರೆ ಹಕ್ಕಿಗೆ ಮರಿ ಆದಾಗ ಅದು ಕೊಕ್ಕಿನಲ್ಲಿ ಆಹಾರ ಶೇಖರಿಸಿಕೊಂಡು ತರುತ್ತದೆ; ಆಗ ಅದೂ ಸಂಚಯ ಮಾಡಬೇಕಾಗುತ್ತದೆ. ಪರಿವಾರದ ರಕ್ಷಣೆ ಮಾಡಬೇಕಾಗಿರುವುದರಿಂದ ಸಂಸಾರಿಗೆ ದುಡ್ಡಿನ ಆವಶ್ಯಕತೆ ಇದೆ.

ಯಾರು ಸಂಸಾರದಲ್ಲಿದ್ದು ಭಗವಂತನನ್ನು ಕರೆಯಬಲ್ಲರೊ ಅವರೇ ವೀರಭಕ್ತರು. ಅವರ ತಲೆಯ ಮೇಲೆ ಇಪ್ಪತ್ತು ಮಣದ ಹೊರೆ ಇದೆ; ಆದರೂ ಭಗವಂತನ ಸಾಕ್ಷಾತ್ಕಾರ ಪಡೆದುಕೊಳ್ಳಲು ಪ್ರಯತ್ನಪಡುತ್ತಿದ್ದಾರೆ. ಹೀಗೆ ಮಾಡುವುದು ಕಠಿಣ ಎಂದು ನೀವು ಹೇಳಬಹುದು. ಭಗವಂತನ ಕೃಪೆಯಿಂದ ಏನು ತಾನೆ ಸಾಧ್ಯವಿಲ್ಲ?